All India Radio: Bangalore
National Bulletin In Kannada
10.03.2026  19.35 hrs
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

- ೨೦೨೮ರ ಡಿಸೆಂಬರ್‌ವರೆಗೆ ಜಲಜೀವನ್ ಮಿಷನ್ ಯೋಜನೆ ವಿಸ್ತರಣೆಗೆ ಕೇಂದ್ರ ಸಂಪುಟ ಸಭೆ ಅನುಮೋದನೆ
- ಲೋಕಸಭಾಧ್ಯಕ್ಷ ಓಂ ಬಿರ್ಲಾ ಪದಚ್ಯುತಿ ನಿರ್ಣಯದ ಕುರಿತು ಲೋಕಸಭೆಯಲ್ಲಿ ಚರ್ಚೆ
- ದೇಶದಲ್ಲಿ ಇಂಧನ ಕೊರತೆಯಿಲ್ಲ, ಆತಂಕ ಬೇಡ - ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ ಭರವಸೆ
- ರೈಲು ಮೂಲಸೌಕರ್ಯ ಮತ್ತು ತಂತ್ರಜ್ಞಾನ ಮೇಲ್ದರ್ಜೆಗೇರಿಸಲು ಭಾರತೀಯ ರೈಲ್ವೆಯಿಂದ ೭೬೫ ಕೋಟಿ ರೂಪಾಯಿ ಮಂಜೂರು
- ಸ್ವಿಟ್ಜರ್‌ಲ್ಯಾಂಡ್‌ನ ಬಾಸಲ್‌ನಲ್ಲಿ ಸ್ವಿಸ್ ಬ್ಯಾಡ್ಮಿಂಟನ್ ಟೂರ್ನಿಗೆ ಚಾಲನೆ; ನಾಳೆಯಿಂದ ಭಾರತೀಯ ಶೆಟ್ಲರ್‌ಗಳು ಕಣದಲ್ಲಿ

***************

ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಇಂದು ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ 'ಜಲ ಜೀವನ್ ಮಿಷನ್' ಯೋಜನೆಯನ್ನು ಡಿಸೆಂಬರ್ ೨೦೨೮ರವರೆಗೆ ವಿಸ್ತರಿಸಲು ಅನುಮೋದನೆ ನೀಡಲಾಗಿದೆ.

ಈ ಕುರಿತು ಮಾಧ್ಯಮಗಳಿಗೆ ಮಾಹಿತಿ ನೀಡಿದ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್, ಈ ಯೋಜನೆಯ ಅನುಷ್ಠಾನವನ್ನು ಮೂಲಸೌಕರ್ಯ ನಿರ್ಮಾಣದಿಂದ 'ಸೇವಾ ವಿತರಣೆ'ಗೆ ಮರುಹೊಂದಿಸುವ ಜಲಶಕ್ತಿ ಸಚಿವಾಲಯದ ಪ್ರಸ್ತಾವನೆಗೆ ಅನುಮೋದನೆ ನೀಡಲಾಗಿದೆ. ಎಂದು ತಿಳಿಸಿದರು. ಇದಕ್ಕಾಗಿ ಒಟ್ಟು ೮.೬೯ ಲಕ್ಷ ಕೋಟಿ ರೂಪಾಯಿಗಳ ವೆಚ್ಚವನ್ನು ಅಂದಾಜಿಸಲಾಗಿದ್ದು, ಕೇಂದ್ರ ಸರ್ಕಾರದ ಪಾಲನ್ನು ೩.೫೯ ಲಕ್ಷ ಕೋಟಿ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ ಎಂದರು.

ಈ ಯೋಜನೆಯಡಿ "ಸುಜಲಂ ಭಾರತ್" ಎಂಬ ರಾಷ್ಟ್ರೀಯ ಡಿಜಿಟಲ್ ಚೌಕಟ್ಟನ್ನು ಸ್ಥಾಪಿಸಲಾಗುತ್ತಿದ್ದು, ಪ್ರತಿಯೊಂದು ಗ್ರಾಮಕ್ಕೂ ವಿಶಿಷ್ಟ ಗುರುತಿನ ಸಂಖ್ಯೆ ನೀಡುವ ಮೂಲಕ ಕುಡಿಯುವ ನೀರಿನ ಪೂರೈಕೆಯನ್ನು ಡಿಜಿಟಲ್ ನಕ್ಷೆಯಡಿ ತರಲಾಗುವುದು ಎಂದು ತಿಳಿಸಿದರು.

ಸಚಿವ ಸಂಪುಟವು ತಮಿಳುನಾಡಿನ ಮದುರೈ ವಿಮಾನ ನಿಲ್ದಾಣವನ್ನು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವೆಂದು ಘೋಷಿಸಲು ಒಪ್ಪಿಗೆ ನೀಡಿದೆ. ದಕ್ಷಿಣ ತಮಿಳುನಾಡಿನ ಪ್ರಮುಖ ಪ್ರವೇಶ ದ್ವಾರವಾಗಿರುವ ಈ ನಿಲ್ದಾಣಕ್ಕೆ ಅಂತಾರಾಷ್ಟ್ರೀಯ ಸ್ಥಾನಮಾನ ನೀಡುವುದರಿಂದ ಪ್ರವಾಸೋದ್ಯಮ, ವ್ಯಾಪಾರ ಮತ್ತು ಪ್ರಾದೇಶಿಕ ಆರ್ಥಿಕ ಅಭಿವೃದ್ಧಿಗೆ ಹೆಚ್ಚಿನ ಉತ್ತೇಜನ ಸಿಗಲಿದೆ.

ಇದರ ಜೊತೆಗೆ, ಜೆವಾರ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಗ್ರೀನ್‌ಫೀಲ್ಡ್ ಸಂಪರ್ಕ ಕಲ್ಪಿಸುವ ಯೋಜನೆಯ ೩ ಸಾವಿರದ ೬೩೦.೭೭ ಕೋಟಿ ರೂಪಾಯಿಯ ಪರಿಷ್ಕೃತ ವೆಚ್ಚಕ್ಕೆ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ ಅನುಮೋದನೆ ನೀಡಿದೆ. ೩೧.೪೨ ಕಿಲೋಮೀಟರ್ ಉದ್ದದ ಈ ಕಾರಿಡಾರ್ ದಕ್ಷಿಣ ದೆಹಲಿ, ಫರಿದಾಬಾದ್ ಮತ್ತು ಗುರುಗ್ರಾಮ್‌ನಿಂದ ಜೆವಾರ್ ವಿಮಾನ ನಿಲ್ದಾಣಕ್ಕೆ ವೇಗದ ಸಂಪರ್ಕ ಕಲ್ಪಿಸಲಿದೆ.

ಇತರ ಪ್ರಮುಖ ನಿರ್ಧಾರಗಳಲ್ಲಿ, ಮಧ್ಯಪ್ರದೇಶದ ಬದ್ನಾವರ್-ಪೆಟ್ಲಾವದ್-ತಾಂಡ್ಲಾ-ತಿಮರ್ವಾಣಿ ವಿಭಾಗದ ೮೦.೪೫ ಕಿಲೋಮೀಟರ್ ಉದ್ದದ ಚತುಷ್ಪಥ ಕಾರಿಡಾರ್ ಅಭಿವೃದ್ಧಿಗೆ ೩ ಸಾವಿರದ ೮೩೯.೪೨ ಕೋಟಿ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ. ಇದು ಉಜ್ಜಯಿನಿಯಿಂದ ದೆಹಲಿ-ಮುಂಬೈ ಎಕ್ಸ್‌ಪ್ರೆಸ್‌ವೇಗೆ ಸಂಪರ್ಕ ಕಲ್ಪಿಸಲಿದ್ದು, ಪ್ರಯಾಣದ ಸಮಯವನ್ನು ಸುಮಾರು ಒಂದು ಗಂಟೆ ಕಡಿತಗೊಳಿಸಲಿದೆ. ಇದರ ಜೊತೆಗೆ, ರೈಲ್ವೆ ಸಚಿವಾಲಯದ ೪ ಸಾವಿರದ ೪೭೪ ಕೋಟಿ ರೂಪಾಯಿ ವೆಚ್ಚದ ಎರಡು ಯೋಜನೆಗಳಾದ ಸೈಂತಿಯಾ-ಪಾಕುರ್ ಮತ್ತು ಸಾಂತ್ರಗಾಚಿ-ಖರಗ್‌ಪುರ ೪ನೇ ರೈಲು ಮಾರ್ಗಕ್ಕೆ ಸಂಪುಟವು ಹಸಿರು ನಿಶಾನೆ ತೋರಿದೆ. ಈ ಕ್ರಮವು ರೈಲ್ವೆ ಕಾರ್ಯಾಚರಣೆಯ ದಕ್ಷತೆಯನ್ನು ಹೆಚ್ಚಿಸಿ, ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ಸಹಕಾರಿಯಾಗಲಿದೆ ಎಂದು ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

***************

ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರನ್ನು ಪದಚ್ಯುತಿಗೊಳಿಸುವಂತೆ ಕೋರಿ ಪ್ರತಿಪಕ್ಷಗಳು ಮಂಡಿಸಿರುವ ನಿರ್ಣಯದ ಕುರಿತ ಚರ್ಚೆಯನ್ನು ಲೋಕಸಭೆಯಲ್ಲಿಂದು ಕೈಗೆತ್ತಿಕೊಳ್ಳಲಾಯಿತು.

ಕಾಂಗ್ರೆಸ್ ಸಂಸದ ಡಾ.ಮೊಹಮ್ಮದ್ ಜಾವೇದ್ ಈ ನಿರ್ಣಯ ಮಂಡಿಸಿ ಸಭಾಧ್ಯಕ್ಷರು ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಸೇರಿದಂತೆ ಇತರೆ ಸದಸ್ಯರಿಗೆ ತಮ್ಮ ಅಭಿಪ್ರಾಯ ಮಂಡಿಸಲು ಅವಕಾಶ ನೀಡುತ್ತಿಲ್ಲ ಹಾಗೂ ಮಹಿಳಾ ಸಂಸದರ ವಿರುದ್ಧ ಅನಗತ್ಯ ಆರೋಪಗಳನ್ನು ಮಾಡುವ ಮೂಲಕ ನಿಷ್ಪಕ್ಷಪಾತ ಧೋರಣೆ ಕಾಯ್ದುಕೊಳ್ಳಲು ವಿಫಲರಾಗಿದ್ದಾರೆ ಎಂದು ದೂರಿದರು.

ಚರ್ಚೆಯಲ್ಲಿ ಭಾಗವಹಿಸಿದ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಪ್ರತಿಪಕ್ಷಗಳ ಆರೋಪಗಳನ್ನು ತಳ್ಳಿ ಹಾಕಿದರು. ಓಂ ಬಿರ್ಲಾ ಅವರ ಅವಧಿಯಲ್ಲಿ ಸಂಸತ್ ಸಂಪೂರ್ಣ ಡಿಜಿಟಲ್ ರೂಪಾಂತರಗೊಂಡಿದ್ದು, ಶೂನ್ಯವೇಳೆಯಲ್ಲಿ ಅತಿ ಹೆಚ್ಚು ವಿಷಯಗಳನ್ನು ಚರ್ಚಿಸಲಾಗಿದೆ ಎಂದರು.

೧೮ನೇ ಲೋಕಸಭೆಯಲ್ಲಿ ಆಡಳಿತ ಪಕ್ಷಕ್ಕಿಂತಲೂ ಪ್ರತಿಪಕ್ಷಗಳ ಸದಸ್ಯರಿಗೆ ಹೆಚ್ಚಿನ ಪೂರಕ ಪ್ರಶ್ನೆಗಳಿಗೆ ಮತ್ತು ಶೂನ್ಯ ವೇಳೆಯಲ್ಲಿ ಶೇಕಡ ೫೬ ರಷ್ಟು ಹೆಚ್ಚಿನ ಅವಕಾಶಗಳನ್ನು ನೀಡಲಾಗಿದೆ ಎಂದು ಸಚಿವರು ಸಮರ್ಥಿಸಿಕೊಂಡರು.

ಪ್ರತಿಪಕ್ಷಗಳು ಕೇವಲ ರಾಜಕೀಯ ಹಿತಾಸಕ್ತಿಗಾಗಿ ಈ ನಿರ್ಣಯ ತಂದಿವೆ ಎಂದು ಸಚಿವ ಕಿರಣ್ ರಿಜಿಜು ಟೀಕಿಸಿದರು.

ಇದಕ್ಕೂ ಮುನ್ನ ಚರ್ಚೆ ಆರಂಭಿಸಿದ ಕಾಂಗ್ರೆಸ್‌ನ ಗೌರವ್ ಗೊಗೊಯ್, ಇದು ವೈಯಕ್ತಿಕ ವಿರೋಧವಲ್ಲ ಬದಲಿಗೆ ಸದನದ ಘನತೆ ಮತ್ತು ಹಕ್ಕು ರಕ್ಷಣೆಗಾಗಿ ತಂದಿರುವ ನಿರ್ಣಯ ಎಂದರು.

ಇದೇ ರೀತಿ ಸಮಾಜವಾದಿ ಪಕ್ಷದ ರಾಜೀವ್ ರಾಯ್, ತೃಣಮೂಲ ಕಾಂಗ್ರೆಸ್‌ನ ಮಹುವಾ ಮೊಯಿತ್ರಾ ತಮ್ಮ ಅನಿಸಿಕೆಗಳನ್ನು ಹಂಚಿ ಸಭಾಧ್ಯಕ್ಷರ ಕುರಿತು ಆಕ್ಷೇಪ ವ್ಯಕ್ತಪಡಿಸಿದರು.

***************

ದೇಶೀಯ ಗ್ರಾಹಕರಿಗೆ ಯಾವುದೇ ಇಂಧನ ಕೊರತೆಯಿಲ್ಲ ಹಾಗೂ ಈ ಬಗ್ಗೆ ಆತಂಕಪಡುವ ಅಗತ್ಯವಿಲ್ಲ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ಭರವಸೆ ನೀಡಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ನೀಡಿರುವ ಅವರು, ಭಾರತದ ಇಂಧನ ಆಮದು ಪ್ರಕ್ರಿಯೆ ವಿವಿಧ ಮೂಲಗಳು ಹಾಗೂ ಮಾರ್ಗಗಳ ಮೂಲಕ ನಿರಂತರವಾಗಿ ನಡೆಯುತ್ತಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಪಶ್ಚಿಮ ಏಷ್ಯದ ಪ್ರಸ್ತುತ ಪರಿಸ್ಥಿತಿಯ ನಡುವೆ ದೇಶೀಯ ಗ್ರಾಹಕರಿಗೆ ಸಿಎನ್‌ಜಿ ಮತ್ತು ಪಿಎನ್‌ಜಿ ಪೂರೈಕೆಯಲ್ಲಿ ಯಾವುದೇ ವ್ಯತ್ಯಯವಾಗದಂತೆ ಸರಬರಾಜು ಖಚಿತಪಡಿಸಲು ಸರ್ಕಾರ ಅಗತ್ಯ ಕ್ರಮ ಕೈಗೊಂಡಿದೆ ಎಂದು ಹೇಳಿದರು.

***************

ಪೂರ್ವ ಕರಾವಳಿ, ದಕ್ಷಿಣ ಮಧ್ಯ ಮತ್ತು ಪಶ್ಚಿಮ ರೈಲ್ವೆ ವಲಯಗಳಲ್ಲಿ ಮೂಲಸೌಕರ್ಯ ಹಾಗೂ ತಂತ್ರಜ್ಞಾನ ಮೇಲ್ದರ್ಜೆಗೇರಿಸಲು ೭೬೫ ಕೋಟಿ ರೂಪಾಯಿಗಳನ್ನು ಭಾರತೀಯ ರೈಲ್ವೆ ಮಂಜೂರು ಮಾಡಿದೆ.

ಈ ಪೈಕಿ ಪೂರ್ವ ಕರಾವಳಿ ರೈಲ್ವೆಯ ವಿದ್ಯುತ್ ಟ್ರ್ಯಾಕ್ಷನ್ ವ್ಯವಸ್ಥೆ ನವೀಕರಣಕ್ಕೆ ೩೧೮ ಕೋಟಿ ರೂಪಾಯಿ ಹಾಗೂ ದಕ್ಷಿಣ ಮಧ್ಯ ರೈಲ್ವೆಯ ರಾಯಚೂರು-ಗುಂತಕಲ್ ವಿಭಾಗದ ವಿದ್ಯುತ್ ವ್ಯವಸ್ಥೆ ಸುಧಾರಣೆಗೆ ೨೫೯ ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿದೆ. ಈ ಯೋಜನೆಗಳಿಂದ ಹೌರಾ-ಚೆನ್ನೈ ಮತ್ತು ಮುಂಬೈ-ಚೆನ್ನೈ ಮಾರ್ಗಗಳಲ್ಲಿ ರೈಲುಗಳ ವೇಗ ಹಾಗೂ ಸರಕು ಸಾಗಣೆ ಸಾಮರ್ಥ್ಯ ಹೆಚ್ಚಾಗಲಿದೆ.

ಇದಲ್ಲದೆ, ಪಶ್ಚಿಮ ರೈಲ್ವೆಯ ವಡೋದರಾ ಮತ್ತು ಮುಂಬೈ ವಿಭಾಗಗಳಲ್ಲಿ ೧ ಸಾವಿರ ಕಿಲೋಮೀಟರ್ ಉದ್ದದ ಆಪ್ಟಿಕಲ್ ಫೈಬರ್ ಕೇಬಲ್ ಅಳವಡಿಸಲು ೧೮೭ ಕೋಟಿ ರೂಪಾಯಿ ಮಂಜೂರು ಮಾಡಲಾಗಿದೆ. ಇದು ರೈಲು ಅಪಘಾತ ತಡೆ ತಂತ್ರಜ್ಞಾನವಾದ 'ಕವಚ' ಸೇರಿದಂತೆ ಡಿಜಿಟಲ್ ಸಂವಹನ ವ್ಯವಸ್ಥೆಯನ್ನು ಬಲಪಡಿಸಲಿದೆ. ರೈಲ್ವೆ ಜಾಲದ ಪ್ರಮುಖ ವಿಭಾಗಗಳಲ್ಲಿ

ಕಾರ್ಯಾಚರಣೆ ದಕ್ಷತೆ ಮತ್ತು ಆಧುನೀಕರಣವನ್ನು ಉತ್ತೇಜಿಸುವುದು ಈ ಯೋಜನೆಗಳ ಮುಖ್ಯ ಉದ್ದೇಶವಾಗಿದೆ ಎಂದು ರೈಲ್ವೆ ಸಚಿವಾಲಯ ತಿಳಿಸಿದೆ.

***************

ಕಳೆದ ಹತ್ತು ವರ್ಷಗಳಲ್ಲಿ ದೇಶಾದ್ಯಂತ ಪರಿಸರ ಸಮತೋಲಿತ ಅಭಿವೃದ್ಧಿಯ ಆಧಾರದ ಮೇಲೆ ಕೇಂದ್ರ ಸರ್ಕಾರ ಮುನ್ನಡೆದಿದೆ ಎಂದು ಕೇಂದ್ರ ಪರಿಸರ ಸಚಿವ ಭೂಪೇಂದ್ರ ಯಾದವ್ ತಿಳಿಸಿದ್ದಾರೆ.

ರಾಜ್ಯಸಭೆಯಲ್ಲಿ ಇಂದು ಸಚಿವಾಲಯದ ಕಾರ್ಯವೈಖರಿ ಕುರಿತ ಚರ್ಚೆಗೆ ಉತ್ತರಿಸಿದ ಅವರು, ೨೦೧೪ರಲ್ಲಿ ೭೫೭ ಇದ್ದ ಸಂರಕ್ಷಿತ ಪ್ರದೇಶಗಳ ಸಂಖ್ಯೆ ೨೦೨೬ರ ವೇಳೆಗೆ ೧ ಸಾವಿರದ ೧೩೪ಕ್ಕೆ ಏರಿಕೆಯಾಗಿದೆ ಎಂದು ತಿಳಿಸಿದರು.

ರಾಷ್ಟ್ರೀಯ ಉದ್ಯಾನಗಳು ೧೦೬ಕ್ಕೆ ಮತ್ತು ವನ್ಯಜೀವಿ ಅಭಯಾರಣ್ಯಗಳ ಸಂಖ್ಯೆ ೫೭೪ಕ್ಕೆ ಹೆಚ್ಚಳವಾಗಿದ್ದು, ಹುಲಿ ಸಂರಕ್ಷಿತ ಪ್ರದೇಶಗಳು ೪೭ ರಿಂದ ೫೮ಕ್ಕೆ ಏರಿವೆ ಎಂದು ಅವರು ವಿವರಿಸಿದರು.

ಭಾರತವು ಪ್ರಸ್ತುತ ವಿಶ್ವದ ಶೇಕಡ ೭೦ರಷ್ಟು ಕಾಡು ಹುಲಿಗಳನ್ನು ಹೊಂದಿದ್ದು, ಇವುಗಳ ಸಂಖ್ಯೆ ೩ ಸಾವಿರದ ೬೮೨ಕ್ಕೆ ತಲುಪಿದೆ. ಸಿಂಹಗಳ ಸಂಖ್ಯೆ ೫೨೩ ರಿಂದ ೮೯೧ಕ್ಕೆ ಹಾಗೂ ಆನೆ ಸಂರಕ್ಷಿತ ಪ್ರದೇಶಗಳು ೩೩ಕ್ಕೆ ಏರಿಕೆಯಾಗಿವೆ ಎಂದು ಸಚಿವರು ಮಾಹಿತಿ ನೀಡಿದರು. ದೇಶದ ಅರಣ್ಯ ಪ್ರದೇಶವು ಕೂಡ ವಿಸ್ತರಿಸಿದೆ ಎಂದರು. ಇದಕ್ಕೂ ಮುನ್ನ ಚರ್ಚೆಯಲ್ಲಿ ಭಾಗವಹಿಸಿದ್ದ ಕಾಂಗ್ರೆಸ್‌ನ ನೀರಜ್ ಡಾಂಗಿ ಅವರು ಅರಾವಳಿ ಪರ್ವತ ಶ್ರೇಣಿಯಲ್ಲಿನ ಅಕ್ರಮ ಗಣಿಗಾರಿಕೆಯ ಬಗ್ಗೆ ಕಳವಳ ವ್ಯಕ್ತಪಡಿಸಿದ್ದರು.

***************

ರಾಜ್ಯಸಭೆಯಲ್ಲಿಂದು ಗ್ರಾಮೀಣಾಭಿವೃದ್ಧಿ ಸಚಿವಾಲಯದ ಕಾರ್ಯವೈಖರಿ ಕುರಿತು ಮಹತ್ವದ ಚರ್ಚೆ ನಡೆಯಿತು.

ಚರ್ಚೆ ಆರಂಭಿಸಿದ ಬಿಜೆಪಿ ಸಂಸದ ಕೆ. ಲಕ್ಷ್ಮಣ್, ಪ್ರಧಾನಮಂತ್ರಿ ಆವಾಸ್ ಯೋಜನೆ, ಮುದ್ರಾ ಮತ್ತು ಉಜ್ವಲ ಯೋಜನೆಗಳು ಗ್ರಾಮೀಣ ಜನರ ಜೀವನಮಟ್ಟವನ್ನು ಸುಧಾರಿಸಿ ಅವರಿಗೆ ಗೌರವಯುತ ಬದುಕು ನೀಡಿವೆ ಎಂದು ಶ್ಲಾಘಿಸಿದರು.

ಕಾಂಗ್ರೆಸ್ ಸಂಸದೆ ರಜನಿ ಪಾಟೀಲ್, ಬಜೆಟ್‌ನಲ್ಲಿ ಗ್ರಾಮೀಣಾಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡುವಂತೆ ಆಗ್ರಹಿಸಿ, ರೈತರ ಸಮಸ್ಯೆಗಳಿಗೆ ಬೆಂಬಲ ನೀಡುವ ಅಗತ್ಯವಿದೆ ಎಂದರು.

ತೃಣಮೂಲ ಕಾಂಗ್ರೆಸ್ ಸದಸ್ಯರು ಪಶ್ಚಿಮ ಬಂಗಾಳಕ್ಕೆ ಬರಬೇಕಾದ ಆವಾಸ್ ಯೋಜನೆಯ ಅನುದಾನದ ಬಾಕಿ ಬಗ್ಗೆ ಪ್ರಸ್ತಾಪಿಸಿದರೆ, ಬಿಜೆಡಿ ಮತ್ತು  ಸಿಪಿಐ-ಎಂ ಸದಸ್ಯರು ರಾಜ್ಯಗಳ ಮೇಲಿನ ಆರ್ಥಿಕ ಹೊರೆ ಹಾಗೂ ಆದಿವಾಸಿಗಳ ಅಭಿವೃದ್ಧಿಯ ಬಗ್ಗೆ ಕಳವಳ ವ್ಯಕ್ತಪಡಿಸಿದರು.

***************

ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ-ಯುಸಿಸಿಯನ್ನು ಜಾರಿಗೆ ತರುವ ಸಮಯ ಬಂದಿದೆ ಎಂದು ಸುಪ್ರೀಂ ಕೋರ್ಟ್ ಇಂದು ಅಭಿಪ್ರಾಯಪಟ್ಟಿದೆ. ೧೯೩೭ರ ಶರಿಯತ್ ಕಾಯ್ದೆಯ ನಿಬಂಧನೆಗಳು ಮುಸ್ಲಿಂ ಮಹಿಳೆಯರ ವಿರುದ್ಧ ತಾರತಮ್ಯದಿಂದ ಕೂಡಿದ್ದು, ಅವುಗಳನ್ನು ರದ್ದುಪಡಿಸಬೇಕು ಎಂದು ಕೋರಿ ಸಲ್ಲಿಕೆಯಾಗಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಲಯವು, ಇದು ಶಾಸಕಾಂಗ ಪರಿಶೀಲಿಸಬೇಕಾದ ಪ್ರಕರಣವಾಗಿದೆ ಎಂದು ತಿಳಿಸಿದೆ.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್, ನ್ಯಾಯಮೂರ್ತಿಗಳಾದ ಜೊಯ್‌ಮಲ್ಯ ಬಾಗ್ಚಿ ಮತ್ತು ಆರ್. ಮಹದೇವನ್ ಅವರನ್ನೊಳಗೊಂಡ ಪೀಠವು, ಒಂದು ವೇಳೆ ನ್ಯಾಯಾಲಯವು ಶರಿಯತ್ ಉತ್ತರಾಧಿಕಾರ ಕಾನೂನನ್ನು ರದ್ದುಪಡಿಸಿದರೆ, ಮುಸ್ಲಿಂ ಉತ್ತರಾಧಿಕಾರವನ್ನು ನಿಯಂತ್ರಿಸಲು ಯಾವುದೇ ಶಾಸನಬದ್ಧ ಕಾನೂನು ಇಲ್ಲದಿರುವುದರಿಂದ ಕಾನೂನಾತ್ಮಕ ಅಂತರ ಸೃಷ್ಟಿಯಾಗಲಿದೆ ಎಂದು ತಿಳಿಸಿದೆ. ಈ ಹಿನ್ನೆಲೆಯಲ್ಲಿ ಶಾಸಕಾಂಗವು ಈ ವಿಷಯವನ್ನು ಗಮನಿಸುವುದು ಸೂಕ್ತ ಎಂದು ಪೀಠವು ಈ ಸಂದರ್ಭದಲ್ಲಿ ತಿಳಿಸಿದೆ.

***************

ಪಶ್ಚಿಮ ಏಷ್ಯಾ ಪರಿಸ್ಥಿತಿ ಕುರಿತು ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್.ಜೈಶಂಕರ್ ಅವರಿಂದು ಜರ್ಮನಿಯ ವಿದೇಶಾಂಗ ಸಚಿವ ಜೊಹಾನ್ ವಾಡೇಫುಲ್ ಅವರೊಂದಿಗೆ ವಿಚಾರ ವಿನಿಮಯ ಮಾಡಿಕೊಂಡರು. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಸಚಿವರು ಹಂಚಿಕೊಂಡಿದ್ದಾರೆ.

***************

ಪ್ರಸಾರ ಭಾರತಿಯ 'ಶೇರ್ಡ್ ಆಡಿಯೋ-ವಿಶುವಲ್ಸ್ ಫಾರ್ ಬ್ರಾಡ್‌ಕಾಸ್ಟ್ ಅಂಡ್ ಡಿಸೆಮಿನೇಷನ್'-ಪಿಬಿ-ಶಬ್ದ್ ವೇದಿಕೆಯು ಮುಂದಿನ ವರ್ಷದ ಮಾರ್ಚ್‌ವರೆಗೆ ತನ್ನ ಲೋಗೋ-ರಹಿತ ದೈನಂದಿನ ಸುದ್ದಿಗಳನ್ನು ಉಚಿತವಾಗಿ ನೀಡಲಿದೆ ಎಂದು ಮಾಹಿತಿ ಮತ್ತು ತಂತ್ರಜ್ಞಾನ ಸಚಿವಾಲಯ ಇಂದು ತಿಳಿಸಿದೆ.

ಈ ವೇದಿಕೆಯು ೧ ಸಾವಿರದ ೫೦೦ಕ್ಕೂ ಹೆಚ್ಚು ವರದಿಗಾರರು ಮತ್ತು ೬೦ಕ್ಕೂ ಹೆಚ್ಚು ವಿಶೇಷ ಸಂಪಾದಕೀಯ ವಿಭಾಗಗಳ ನೆರವಿನೊಂದಿಗೆ ವಿವಿಧ ಪ್ರಕಾರಗಳಲ್ಲಿ ಪ್ರತಿದಿನ ಸುಮಾರು ಒಂದು ಸಾವಿರಕ್ಕೂ ಹೆಚ್ಚು ಸುದ್ದಿಗಳನ್ನು ಒದಗಿಸುತ್ತಿದೆ.

ರಾಷ್ಟ್ರೀಯ ಪ್ರಾಮುಖ್ಯತೆಯ ಕಾರ್ಯಕ್ರಮಗಳು, ಪದವಿ ಪ್ರದಾನ ಸಮಾರಂಭಗಳು ಹಾಗೂ ಪತ್ರಿಕಾಗೋಷ್ಠಿಗಳ ನೇರ ಪ್ರಸಾರವನ್ನು ಒದಗಿಸುವ 'ಲೈವ್ ಫೀಡ್' ಸೌಲಭ್ಯವನ್ನೂ ಈ ವೇದಿಕೆ ಹೊಂದಿದೆ

***************

ಸ್ವಿಟ್ಜರ್‌ಲ್ಯಾಂಡ್‌ನ ಬಾಸೆಲ್‌ನಲ್ಲಿಂದು ಸ್ವಿಸ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಗೆ ಚಾಲನೆ ದೊರೆತಿದೆ.

ಭಾರತದ ಪರವಾಗಿ ಸಿಂಗಲ್ಸ್ ವಿಭಾಗದಲ್ಲಿ ಕಿಡಂಬಿ ಶ್ರೀಕಾಂತ್ ನಾಳೆ ಹಾಕಾಂಗ್‌ನ ಜೇಸನ್ ಗುನವಾನ್ ವಿರುದ್ಧ ಕಣಕ್ಕಿಳಿಯಲಿದ್ದಾರೆ.

ಪುರುಷರ ಡಬಲ್ಸ್‌ನಲ್ಲಿ ವಿಶ್ವದ ನಾಲ್ಕನೇ ಶ್ರೇಯಾಂಕಿತ ಭಾರತದ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಸಿಂಗಾಪುರ ಜೋಡಿ ವಿರುದ್ಧ ಸೆಣಸಾಟ ನಡೆಸಲಿದ್ದಾರೆ.

ಭಾರತದ ಹರಿಹರನ್ ಅಂಸಕರುಣನ್ ಮತ್ತು ಎಂ.ಆರ್.ಅರ್ಜುನ್ ಚೀನಾ ಜೋಡಿ ವಿರುದ್ಧ ಸೆಣಸಲಿದೆ.

ಮಹಿಳಾ ಸಿಂಗಲ್ಸ್‌ನಲ್ಲಿ ಭಾರತದ ಉನ್ನತಿ ಹೂಡಾ ಹಾಗೂ ಮಹಿಳಾ ಡಬಲ್ಸ್‌ನಲ್ಲಿ ಭಾರತದ ತ್ರಿಶಾ ಜಾಲಿ ಮತ್ತು ಗಾಯಿತ್ರಿ ಗೋಪಿ ಚಂದ್ ಜೋಡಿ ಕಣಕ್ಕಿಳಿಯುತ್ತಿದೆ.

ಮಿಶ್ರ ಡಬಲ್ಸ್‌ನಲ್ಲಿ ಭಾರತದ ಪರವಾಗಿ ಧ್ರುವ್ ಕಪಿಲಾ ಮತ್ತು ತನಿಶಾ ಕ್ರಾಸ್ಟೋ ಜೋಡಿ ಹಾಗೂ ರೋಹನ್ ಕಪೂರ್ ಮತ್ತು ಋತ್ವಿಕಾ ಗಡ್ಡೆ ಜೋಡಿ ಕಣಕ್ಕಿಳಿಯುತ್ತಿದೆ.

*******ಮುಕ್ತಾಯ********